ಆ) ಇದಕ್ಕೆ ವಿರೋಧವಿದ್ದರೂ ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸುವ ಕಾರಣಗಳನ್ನು ತಿಳಿಸುವುದು;

ಇ) ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸಲು ಹೊರಟಿರುವ ಸರ್ಕಾರ ಆ ವಿಚಾರದಲ್ಲಿನ ಸಾಧಕ–ಬಾಧಗಳನ್ನು ವಿವರವಾಗಿ ತಿಳಿಸುವುದು;

ಈ) ಸ್ವಾಯತ್ತ ಸಂಸ್ಥೆಯನ್ನಾಗಿ ಕೆ.ಆರ್. ಆಸ್ಪತ್ರೆಯನ್ನು ಪರಿವರ್ತಿಸುವುದನ್ನು ಕೈಬಿಡಬೇಕೆಂಬ ಒತ್ತಾಯದ ಹಿನ್ನೆಲೆಯಲ್ಲಿ ಸರ್ಕಾರದ ನಿಲುವೇನು?

ಡಾ॥ ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

**ಹಾಸನ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆ**

4123 (4542) : ಶ್ರೀ ಶಿವಪ್ಪ ಬಿ. (ಸಕಲೇಶಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಕಿರಿಯ ಮತ್ತು ಹಿರಿಯ ಹಾಗೂ ಪ್ರೌಢಶಾಲೆಗಳಲ್ಲಿ ಶಿಕ್ಷಕರ ತೀವ್ರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ, ತಾಲ್ಲೂಕುವಾರು ವಿವರ ನೀಡುವುದು;

ಆ) ಕೊರತೆಯಿರುವ ಶಿಕ್ಷಕರ ಹುದ್ದೆಗಳು ಎಷ್ಟು ವರ್ಷದಿಂದ ಖಾಲಿ ಇದೆ; ಈ ಖಾಲಿ ಇರುವ ಹುದ್ದೆಗಳನ್ನು ತುಂಬಲು ಇನ್ನು ಎಷ್ಟು ಕಾಲಾವಧಿ ಬೇಕು; ಅಲ್ಲಿಯವರೆಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿದೆಯೇ; (ವಿವರ ನೀಡುವುದು)?

ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಬಂದಿದೆ. ಜಿಲ್ಲೆಯಲ್ಲಿ ಖಾಲಿ ಇರುವ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ತಾಲ್ಲೂಕುವಾರು ವಿವರ ಕೆಳಗಿನಂತೆ ಇರುತ್ತವೆ.

| | ತಾಲ್ಲೂಕು | ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳ ಸಂಖ್ಯೆ | ಪ್ರೌಢಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ |
|---|---|---|---|
| 1. | ಅಲೂರು | 96 | 17 |
| 2. | ಅರಕಲಗೂಡು | 152 | 59 |
| 3. | ಅರಸೀಕೆರೆ | 32 | 40 |
| 4. | ಬೇಲೂರು | 140 | 28 |
| 5. | ಚೆನ್ನರಾಯಪಟ್ಟಣ | 103 | 53 |
| 6. | ಹಾಸನ | 06 | 12 |

| | ತಾಲ್ಲೂಕು | ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳ ಸಂಖ್ಯೆ | ಪ್ರೌಢಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ |
|---|---|---|---|
| 7. | ಹೊಳೆನರಸೀಪುರ | 13 | 39 |
| 8. | ಸಕಲೇಶಪುರ | 164 | 27 |
| | ಒಟ್ಟು | 706 | 305 |

ಆ) ಸುಮಾರು 1 ವರ್ಷದಿಂದ ಹುದ್ದೆ ಖಾಲಿ ಇದ್ದು ಹಾಸನ ಜಿಲ್ಲೆಯಲ್ಲಿ ಖಾಲಿ ಇರುವ 706 ಪ್ರಾಥಮಿಕ ಶಾಲಾ ಶಿಕ್ಷಕರ ಪೈಕಿ 200 ಹುದ್ದೆಗಳನ್ನು ನೇಮಕಾತಿ ಮೂಲಕ ಭರ್ತಿ ಮಾಡಲಾಗುವುದು. ಇದೇ ರೀತಿ ಪ್ರೌಢಶಾಲೆಗಳಲ್ಲಿ 305 ಶಿಕ್ಷಕರ ಹುದ್ದೆಗಳು ಕೊರತೆ ಇದೆ. ಸದರಿ ಹುದ್ದೆಗಳನ್ನು ನೇಮಕಾತಿ ಮೂಲಕ ಭರ್ತಿಮಾಡಲಾಗುವುದು. ಅಲ್ಲಿಯವರೆಗೆ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ನಿಯೋಜನೆ ಮುಖಾಂತರ ಪರ್ಯಾಯ ವ್ಯವಸ್ಥೆ ಮಾಡಲಾಗುವುದು.

**ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಿಗೆ ಪ್ರೌಢಶಾಲೆ ಮಂಜೂರಾತಿ**

4124 (4543) : ಶ್ರೀ ಶಿವಪ್ಪ ಬಿ.ಬಿ. (ಸಕಲೇಶಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಿಗೆ ಪ್ರೌಢಶಾಲೆಯನ್ನು ಮಂಜೂರಾತಿ ನೀಡುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಪ್ರಸ್ತಾವನೆ ಸಲ್ಲಿಸಿ ಎಷ್ಟು ವರ್ಷಗಳಾಗಿದೆ;

ಇ) ಯಾವ ಯಾವ ಗ್ರಾಮಗಳಲ್ಲಿ ಪ್ರೌಢಶಾಲೆ ಮಂಜೂರಾತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಈ) ಈ ಗ್ರಾಮಗಳಿಗೆ ಪ್ರೌಢಶಾಲೆಯನ್ನು ಮಂಜೂರಾತಿ ದೊರಕಿಸುವುದು ಯಾವಾಗ?

ಪ್ರೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಪ್ರಸಕ್ತ ಸಾಲಿನಲ್ಲಿ ಸದರಿ ಗ್ರಾಮಗಳಿಗೆ ಪ್ರೌಢಶಾಲೆಯನ್ನು ತೆರೆಯಲು ಪ್ರಸ್ತಾವನೆ ಬಂದಿರುವುದಿಲ್ಲ.

ಆ), ಇ) ಮತ್ತು ಈ) ಉದ್ಭವಿಸುವುದಿಲ್ಲ.

**ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಪುಸ್ತಕಗಳ ಸರಬರಾಜು**

4125 (4544) : ಶ್ರೀ ಶಿವಪ್ಪ ಬಿ.ಬಿ. (ಸಕಲೇಶಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಾಲೆಗಳು ಪ್ರಾರಂಭವಾಗಿ 2 ತಿಂಗಳಾಗುತ್ತಾ ಬಂದರೂ 2,3,4 ಮತ್ತು 9ನೇ ತರಗತಿಯ ಗಣಿತ ಹಾಗೂ 6ನೇ ತರಗತಿಯ ಕನ್ನಡ ಪುಸ್ತಕಗಳು ಸರಬರಾಜು ಆಗದೇ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಇದೂವರೆಗೆ ಸದರಿ ಪುಸ್ತಕಗಳನ್ನು ಸರಬರಾಜು ಮಾಡದಿರಲು ಕಾರಣವೇನು;

ಇ) ಸರಬರಾಜು ಮಾಡಲು ಇನ್ನೂ ಎಷ್ಟು ತಿಂಗಳುಗಳ ಕಾಲಾವಕಾಶ ಬೇಕು; ಶಾಲೆಗಳು ಪ್ರಾರಂಭವಾಗುವ ಮುನ್ನವೇ ಎಲ್ಲಾ ತರಗತಿಯ ಪುಸ್ತಕಗಳನ್ನು ಶಾಲೆಗಳಿಗೆ ಸರಬರಾಜು ಮಾಡಲು ತೊಂದರೆಗಳೇನು?